ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ,
ಚನ್ನರಾಯಪಟ್ಟಣ

**ಸಿಸಿ ನಂ.15/2021**

**ಪಿರ್ಯಾದುದಾರರು** :- **-ವಿರುದ್ಧ -** **ಆರೋಪಿತ :-**

ಎನ್.ಮಹೇಶ್

ಜಯಂತಿ ಕೋಂ ತಮ್ಮಯ್ಯ,
50 ವರ್ಷ,
ವಾಸಃ ಕೇರಾಫ್ ಗೊಬ್ಬರದ ಅಂಗಡಿಯ
ರಾಜು ಮನೆ, ನಾಗಮಂಗಲ ಮುಖ್ಯ ರಸ್ತೆ,
ಶ್ರವಣಬೆಳಗೊಳ ಟೌನ್ ಮತ್ತು ಹೋಬಳಿ,
ಚನ್ನರಾಯಪಟ್ಟಣ ತಾಲ್ಲೂಕು,
ಹಾಸನ ಜಿಲ್ಲೆ.
ಮತ್ತು ಕಾರ್ಪೋರೇಷನ್ ಬ್ಯಾಂಕ್ ಎದುರು,
ಬಾಳೆಹಣ್ಣು ಎಲೆ ಅಡಿಕೆ ವ್ಯಾಪಾರಿ,
ಶ್ರವಣಬೆಳಗೊಳ ಟೌನ್ ಮತ್ತು ಹೋಬಳಿ,
ಚನ್ನರಾಯಪಟ್ಟಣ ತಾಲ್ಲೂಕು,
ಹಾಸನ ಜಿಲ್ಲೆ.

ಅರುಣ ಕುಮಾರಿ ಎ, ಬಿ.ಎ(ಲಾ)., ಎಲ್.ಎಲ್.ಬಿ., ಎಲ್.ಎಲ್.ಎಂ., ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ, ಚನ್ನರಾಯಪಟ್ಟಣ ಆದ ನಾನು ಈ ಮೂಲಕ ಕೆಳಕಂಡಂತೆ ಆಪಾದಿತರಾದ ನಿಮ್ಮ ಮೇಲೆ ಹೊರೆಸುವ ಆಪಾದನೆ.

:: **ಆಪಾದನೆ** ::

ಆರೋಪಿಯಾದ ನೀವು ಹಾಗೂ ಪಿರ್ಯಾದುದಾರರು ಸ್ನೇಹಿತರು ಮತ್ತು ಪರಿಚಯಸ್ಥರಾಗಿದ್ದು, ನಿಮ್ಮ ದರ್ದು ನಿಮಿತ್ತ ಅಂದರೆ ನೀವು ಮಾಡಿದ ಸಾಲ ತೀರುವಳಿ ಮಾಡುವ ಸಲುವಾಗಿ ಮತ್ತು ಗೃಹಕೃತ್ಯದ ಸಲುವಾಗಿ ಹಾಗುಾ ವ್ಯಾಪಾರಕ್ಕಾಗಿ ಪಿರ್ಯಾದಿಯನ್ನು 2020ನೇ ಜನವರಿ ಮಾಹೆ 1ನೇ ವಾರದಲ್ಲಿ ಭೇಟಿ ಮಾಡಿ ರೂ.2,00,000/- ಗಳನ್ನು ಸಾಲವಾಗಿ ಕೇಳಲಾಗಿ ಪಿರ್ಯಾದುದಾರರು ಆರೋಪಿಗೆ ದಿನಾಂಕಃ 04.01.2020 ರಂದು ರೂ.2,00,000/- ಗಳನ್ನು ಸಾಲವಾಗಿ ನೀಡಿದ್ದು, ಸದರಿ ಹಣವನ್ನು ತೀರುವಳಿ ಮಾಡುವ ಖಾತ್ರಿಗಾಗಿ ಆರೋಪಿಯಾದ ನೀವು

ಖಾತೆ ಹೊಂದಿರುವ ಕಾರ್ಪೋರೇಷನ್ ಬ್ಯಾಂಕ್, ಶ್ರವಣಬೆಳಗೊಳ ಶಾಖೆಗೆ ಸೇರಿದ ಚೆಕ್ ನಂ.**436654**ನ್ನು ಮುಂಗಡ ದಿಃ 25.11.2020 ಎಂದು ನಮೂದಿಸಿ ಪಿರ್ಯಾದಿಗೆ ನೀಡಿದ್ದು, ಪಿರ್ಯಾದಿ ಹಣ ಪಡೆಯುವ ಸಲುವಾಗಿ ತಾನು ಖಾತೆ ಹೊಂದಿರುವ ಕಾರ್ಪೋರೇಷನ್ ಬ್ಯಾಂಕ್, ಶ್ರವಣಬೆಳಗೊಳ ಶಾಖೆಗೆ ಚೆಕ್ಕನ್ನು ಹಾಜರುಪಡಿಸಲಾಗಿ ಸದರಿ ಬ್ಯಾಂಕಿನವರು 'Funds Insufficient' ಎಂಬ ಹಿಂಬರಹದೊಂದಿಗೆ ದಿಃ 26.11.2020 ರಂದು ಚೆಕ್ಕನ್ನು ವಾಪಸ್ ನೀಡಿದ್ದು ನಂತರ ಪಿರ್ಯಾದುದಾರರು ತಮ್ಮ ವಕೀಲರ ಮೂಲಕ ನೋಂದಾಯಿತ ಅಂಚೆ ಮೂಲಕ ದಿಃ 27.11.2020 ರಂದು ನೋಟೀಸ್ ನೀಡಿದ್ದು, ಸದರಿ ನೋಟೀಸ್ ದಿನಾಂಕಃ 28.11.2020 ರಂದು ಆರೋಪಿಗೆ ಜಾರಿಯಾಗಿದ್ದು, ನೀವು ಈವರೆಗೂ ಹಣವನ್ನು ವಾಪಸ್ಸು ಮಾಡಿರುವುದಿಲ್ಲ. ಆ ಕಾರಣಕ್ಕಾಗಿ ಕಲಂ 138 ವರ್ಗಾವಣೀಯ ಲಿಖಿತಗಳ ಅಧಿನಿಯಮ ಅಡಿಯಲ್ಲಿ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದ ಒಳಗೆ ಮಾಡಿರುವಿರಿ.

ನಿಮ್ಮ ಮೇಲೆ ಮೇಲ್ಕಂಡ ದಂಡನೀಯ ಆಪಾದನೆಗಳ ವಿಚಾರಣೆ ಈ ನ್ಯಾಯಾಲಯದ ಮುಂದೆ ನಡೆಯತಕ್ಕದೆಂದು ನಿರ್ದೇಶಿಸುತ್ತೇನೆ.

1) ಪ್ರಶ್ನೆಃ-ಈಗ ನಿಮಗೆ ಓದಿ ಹೇಳಲಾದ ಆಪಾದನೆ ನಿಮಗೆ ಅರ್ಥವಾಯಿತೇ?
ಉತ್ತರಃ-

2) ಪ್ರಶ್ನೆಃ- ನೀವು ತಪ್ಪನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಆಗಬೇಕಾಗಿದೆಯೇ?
ಉತ್ತರಃ-

ದಿನಾಂಕಃ 03.04.2025 ರಂದು ಆರೋಪಿತನಿಗೆ ಆಪಾದನೆಗಳ ಸಾರಾಂಶವನ್ನು ತೆರೆದ ನ್ಯಾಯಾಲಯದಲ್ಲಿ ಓದಿ ವಿವರಿಸಿ ಹೇಳಿದಾಗ ಆತನು ಕೊಟ್ಟ ಹೇಳಿಕೆಯನ್ನು ಯಥಾವತ್ತಾಗಿ ದಾಖಲಿಸಲಾಗಿದೆ ಮತ್ತು ಸತ್ಯವಾಗಿದೆ ಅಂತ ನಾನು ದೃಢಪಡಿಸುತ್ತೇನೆ.

**(ಅರುಣ ಕುಮಾರಿ ಎ)**
ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,
ಚನ್ನರಾಯಪಟ್ಟಣ.